**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1607/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಪವನ್ ಕುಮಾರ್ ಸಿ.ಸಿ.. | ಫ್ರಾಸಾ-9 |
| ತಂದೆಯ ಹೆಸರು | : ಚನ್ನಯ್ಯ | ಚಾಸಾ-16 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 01.07.2026. |
| ವಾಸಸ್ಥಳ | : ಸಖರಾಯಪಟ್ಟಣ ಪೊಲೀಸ್ ಠಾಣೆ . | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

1. ನಾನು ದಿ.17.04.2022 ರಿಂದ ದಿ.16.06.2023 ರವರೆಗೂ ಬಾಳೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.24.01.2023 ರಂದು ನಾನು ಪ್ರಕರಣದ ಕಡತವನ್ನು ಚಾಸಾ-15 ಜಾಫರ್ ಶರೀಫ್ ರವರಿಂದ ಪಡೆದುಕೊಂಡು, ಆರೋಪಿ ಪತ್ತೆಗೆ ಚಾಸಾ-15 ಮತ್ತು ಚಾಸಾ-12 ಅಭಿಷೇಕ್ ರವರನ್ನು ನೇಮಕ ಮಾಡಿರುತ್ತೇನೆ.

3. ಅದೇದಿನ ಬೆ.10.45 ಕ್ಕೆ ಆರೋಪಿಯನ್ನು ನನ್ನ ಮುಂದೆ ಹಾಜರುಮಾಡಿರುತ್ತಾರೆ. ನಂತರ ಕಾನೂನು ಬದ್ಧವಾಗಿ ಬೆ.11.00 ಗಂಟೆಗೆ ಅವರನ್ನು ದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ ಮತ್ತು ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ.

4. ಅವರ ಹೇಳಿಕೆಯಂತೆ ಅವರು ನಮ್ಮನ್ನು ಕರೆದುಕೊಂಡು ಹೋಗಿ ಆರೋಪಿಯ ಮನೆಯ ಗೇಟ್ ಬಳಿ ಕೃತ್ಯಕ್ಕೆ ಬಳಸಿದ ಆಯುಧವನ್ನು ತೆಗೆದುಕೊಂಡ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತಾರೆ.

5. ಅದರಂತೆ ನಾವು ಆ ಸ್ಥಳಕ್ಕೆ ಹೋಗಿ ಚಾಸಾ-7 ರಮೇಶ್ ಮತ್ತು ಫ್ರಾಸಾ-8 ಬಿಳಿಯಪ್ಪ ರವರ ಸಮಕ್ಷಮದಲ್ಲಿ ಸ್ಥಳ ಮಹಜರ್ ನ್ನು ಮ.1.00 ರಿಂದ 2.30 ರವರೆಗೂ ಜರುಗಿಸಿರುತ್ತೇನೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. 65(ಬಿ) ಪ್ರಮಾಣಪತ್ರವನ್ನು ಫ್ರಾಸಾ-7 ವಸಂತ ರವರಿಂದ ಪಡೆದಿರುತ್ತೇನೆ.

6. ಅದೇದಿನ ಆರೋಪಿಯು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಿರುತ್ತೇನೆ. ಅದೇದಿನ ಫ್ರಾಸಾ-2 ಪ್ರಸನ್ನ ರವರ ತೇಜಸ್ವಿ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿರುತ್ತಾರೆ, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

7. ದಿ.03.02.2023 ರಂದು ಫ್ರಾಸಾ-1 ಜ್ಯೋತಿ ರವರ ಕಲಂ.164 ಸ್ಟೇಟ್ ಮೆಂಟ್ ನ್ನು ಚಾಸಾ-14 ಸಫ್ರೀನ್ ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

8. ದಿ.04.02.2023 ರಂದು ಆರೋಪಿಯ ಮೊಬೈಲ್ ಸಿಡಿಆರ್ ನ್ನು ಪಡೆಯಲು SP, Chikkamagaluru ರವರಿಗೆ ಮನವಿ ನೀಡಿ ನಂತರ ದಿ.06.02.2023 ರಂದು ಸದರಿ ಸಿಡಿಆರ್ ನ್ನು ಪಡೆದಿರುತ್ತೇನೆ.

9. ದಿ.06.02.2023 ರಂದು ಫ್ರಾಸಾ-1 ಮತ್ತು ಆರೋಪಿಯ ಖಾತಾ ಎಕ್ಸ್ಟ್ರಾಕ್ಟ್ ನ್ನು ಪಡೆಯಲು ಚಾಸಾ-9 PDO ಮನವಿಯನ್ನು ನೀಡಿ ದಿ.10.02.2023 ರಂದು ಸದರಿ ದಾಖಲೆಗಳನ್ನು ಪಡೆದಿರುತ್ತೇನೆ.

10. ದಿ.04.02.2023 ರಂದು ಫ್ರಾಸಾ-2 ಪ್ರಸನ್ನ ರವರ X-Ray ಪ್ರತಿಯನ್ನು ಪಡೆಯಲು ಮಲ್ಲೇಗೌಡ ಆಸ್ಪತ್ರೆಗೆ ಮನವಿಯನ್ನು ನೀಡಿ ದಿ.15.02.2023 ರಂದು ಸದರಿ ದಾಖಲೆಯನ್ನು ಪಡೆದಿರುತ್ತೇನೆ.

11. ದಿ.16.02.2023 ರಂದು ಫ್ರಾಸಾ-6 ಡಾ. ಚಂದ್ರಶೇಖರ್ ರವರಿಗೆ ಫ್ರಾಸಾ-2 ರವರ ಗಾಯದ ಪ್ರಮಾಣಪತ್ರ ಪಡೆಯಲು ಮನವಿಯನ್ನು ನೀಡಿ ಸದರಿ ದಾಖಲೆಯನ್ನು ದಿ.09.03.2023 ರಂದು ಸದರಿ ದಾಖಲೆಯನ್ನು ಪಡೆದಿರುತ್ತೇನೆ. ಅದರಲ್ಲಿ ಸದರಿ ವೈದ್ಯರು ತೀವ್ರ ಸ್ವರೂಪದ ಗಾಯ ಎಂದು ಅಭಿಪ್ರಾಯ ನೀಡಿರುತ್ತಾರೆ.

12. ದಿ.18.03.2023 ರಂದು ಆರೋಪಿತ ಕೃತ್ಯದ ದೊಣ್ಣೆ ಮತ್ತು ಗಾಯದ ಬಗ್ಗೆ ಅಭಿಪ್ರಾಯ ಕೋರಿ ಮನವಿಯನ್ನು ಫ್ರಾಸಾ-6 ರವರಿಗೆ ನೀಡಿರುತ್ತೇನೆ. ಅದರಂತೆ ದಿ.20.03.2023 ರಂದು ಅಭಿಪ್ರಾಯವನ್ನು ಪಡೆದಿರುತ್ತೇನೆ.

13. ದಿ.20.03.2023 ರಂದು ತೀವ್ರ ಸ್ವರೂಪದ ಗಾಯ ಆದ್ದರಿಂದ ಕಲಂ.326 IPC ಯನ್ನು ಅಳವಡಿಸಿಕೊಂಡು ನಂತರ ಅದೇದಿನ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ.

14. ಸಾಕ್ಷಿಯು 65(ಬಿ) ಪ್ರಮಾಣಪತ್ರ ನಿಪಿ-13 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ನಿಪಿ-14 ಮತ್ತು 15 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

15. ಸಾಕ್ಷಿಯು ನಿಪಿ-16ರ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು.

16. ಸಾಕ್ಷಿಯು ನಿಪಿ-17ರ ವೈದ್ಯಾಧಿಕಾರಿಗಳಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು.

17. ಫ್ರಾಸಾ-6 ರವರು ನೀಡಿದ ನಿಪಿ-18 ರ ಅಭಿಪ್ರಾಯ ವರದಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

18. ಸಾಕ್ಷಿಯು ನಿಪಿ-19 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-19(ಸಿ) ಎಂದು ಗುರುತಿಸಲಾಯಿತು. ನಿಪಿ-20 ಮತ್ತು 21 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

19. ಸಾಕ್ಷಿಯು ದಿ.24.01.2023 ರಂದು ಪಂಚರಿಗೆ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-22, ಸಾಕ್ಷಿಯ ಸಹಿಯನ್ನು 22(ಎ) ಎಂದು ಗುರುತಿಸಲಾಯಿತು.

20. ಸಾಕ್ಷಿಯು ದಿ.24.01.2023 ರಂದು ಕಲಂ.164 Cr.P.C ಯ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-23, ಸಾಕ್ಷಿಯ ಸಹಿಯನ್ನು 23(ಎ) ಎಂದು ಗುರುತಿಸಲಾಯಿತು.

21. ಸಾಕ್ಷಿಯು ಕಲಂ.164 Cr.P.C ಯ ಹೇಳಿಕೆಯ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24, ಎಂದು ಗುರುತಿಸಲಾಯಿತು.

22. ಸಾಕ್ಷಿಯು ಚಾಸಾ-9 PDO ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-25, ಸಾಕ್ಷಿಯ ಸಹಿಯನ್ನು 25(ಎ) ಎಂದು ಗುರುತಿಸಲಾಯಿತು.

23. ಸಾಕ್ಷಿಯು ಚಾಸಾ-9 ರವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-26, ಸಾಕ್ಷಿಯ ಸಹಿಯನ್ನು 26(ಎ) ಎಂದು ಗುರುತಿಸಲಾಯಿತು. ಅದಕ್ಕೆ ಅಡಕಗೊಂಡ ರಿಮ್ಯಾಂಡ್ ರಿಜಿಸ್ಟರ್ ಗಳನ್ನು ನಿಪಿ-27 ಮತ್ತು 28 ಎಂದು ಗುರುತಿಸಲಾಯಿತು.

24. ಸಾಕ್ಷಿಯು ವೈದ್ಯಾಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-29, ಸಾಕ್ಷಿಯ ಸಹಿಯನ್ನು 29(ಎ) ಎಂದು ಗುರುತಿಸಲಾಯಿತು.

25. ಸಾಕ್ಷಿಯು ವೈದ್ಯಾಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-30, ಸಾಕ್ಷಿಯ ಸಹಿಯನ್ನು 30(ಎ) ಎಂದು ಗುರುತಿಸಲಾಯಿತು. ಅದಕ್ಕೆ ಅಡಕಗೊಂಡ X-Ray ನ್ನು ನಿಪಿ-31 ಎಂದು ಗುರುತಿಸಲಾಯಿತು.

26. ಸಾಕ್ಷಿಯು ಫ್ರಾಸಾ-6 ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-32, ಸಾಕ್ಷಿಯ ಸಹಿಯನ್ನು 32(ಎ) ಎಂದು ಗುರುತಿಸಲಾಯಿತು.

27. ಸಾಕ್ಷಿಯು SP, ಚಿಕ್ಕಮಗಳೂರು ಇವರಿಗೆ ನೀಡಿದ ಎರಡು ಮನವಿ ಪತ್ರಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-33 ಮತ್ತು 34, ಸಾಕ್ಷಿಯ ಸಹಿಗಳನ್ನು 33(ಎ) ಮತ್ತು 34(ಎ) ಎಂದು ಗುರುತಿಸಲಾಯಿತು.

28. ಸದರಿ ಸಿಡಿಆರ್ ಮತ್ತು CAF(Customer Application Form) ನ್ನು ಒಟ್ಟಾಗಿ ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು (ಪುಟ.ಸಂ.58 ರಿಂದ 66).

29. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರಿಂದ 3 ಮುದ್ದೆಮಾಲುಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ಅಂತಿಮ ವರದಿಯೊಂದಿಗಿರುವ ದಾಖಲಾತಿಗಳನ್ನು ನಾನು ಸಂಪೂರ್ಣವಾಗಿ ಪರಿಶೀಲಿಸಿ ನಂತರ ವರದಿಯನ್ನು ಸಲ್ಲಿಸಿರುತ್ತೇನೆ.

2. ಆರೋಪಿತ ಗೇಟಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ? PDO ರವರು ನೀಡಿಲ್ಲ ಎಂದು ನುಡಿಯುತ್ತಾರೆ.

3. ಆರೋಪಿ ವಾಸವಿರುವ ಮನೆಯ ಬಗ್ಗೆ ಯಾವುದೇ ರೆವಿನ್ಯೂ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ.

4. ಫ್ರಾಸಾ-1 ರವರ ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ದೂರಿನಲ್ಲಾಗಲೀ ಅಥವಾ 164 ಸ್ಟೇಟ್

ಮೆಂಟ್ ನಲ್ಲಿ ಅವರ ಮಾನಕ್ಕೆ ಹಾನಿಯಾಗಿರುವ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ.

5. ಅಂತಿಮ ವರದಿಯಲ್ಲಿ ಯಾವುದೇ ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

6. ಮಾಲು ಪಟ್ಟಿಯಲ್ಲಿ ಒಂದು ಕಿಟಕಿ ಮತ್ತು ಒಂದು ನೀಲಿ ಕಲ್ಲರಿನ ಗ್ಲಾಸ್ ಎಂದು ನಮೂದಿದೆ ಎಂದರೆ ಸರಿ.

7. ಅಂತಿಮ ವರದಿಯ ಕಾಲಂ.11 ರಲ್ಲಿ ಗ್ರೀನ್ ಬ್ರಾಸ್ ಲೆಟ್ ಗ್ಲಾಸ್ ಎಂದು ನಮೂದು ಇದೆ ಎಂದರೆ? ಅದು ಬಳೆಯ ಚೂರುಗಳು ಎಂದು ನುಡಿಯುತ್ತಾರೆ.

8. FIR ನಲ್ಲಿ ಗಾಯದ ವಿಧ ಮೈನರ್ ಎಂದು ನಮೂದಿದೆ ಎಂದರೆ? ನಂತರ ಅದು ವೈದ್ಯರ ಅಭಿಪ್ರಾಯದಂತೆ ಬದಲಾಗಿದೆ ಎಂದು ನುಡಿಯುತ್ತಾರೆ.

9. ನಿಪಿ-3 ಮಹಜರ್ ನಲ್ಲಿನ ಕಚ್ಚಾ ನಕಾಶೆಯಲ್ಲಿ ಮರ ಕಂಬಗಳು 2 ಅಡಿ ಎಂದು ನಮೂದು ಇದೆ ಎಂದರೆ? ಸರಿ.

10. ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರ ದೊಣ್ಣೆ 39 ಇಂಚಿದೆ ಎಂದರೆ? ಅದನ್ನು ನಾನು ವಶಪಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

11. ನೀವು ಆರೋಪಿಯಿಂದ ಯಾವುದೇ ಸ್ವ ಇಚ್ಛಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪ್ರಕರಕ್ಕೋಸ್ಕರ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

12. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.